ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ಇತರ ರಾಜ್ಯಗಳ ಮಾಹಿತಿ

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡ ಪ್ರಭ    ದಿನಾಂಕ : DATE : 20/09/2019

# ಪ.ಬಂಗಾಳ ವಿವಿ: ಕೇಂದ್ರ ಸಚಿವನ ಮೇಲೆ ದಾದಾಗಿರಿ

ಕ.ಪ್ರ 20/9/19

## ಕೂದಲು ಹಿಡಿದೆಳೆದ ವಿದ್ಯಾರ್ಥಿಗಳು ಸುಪ್ರಿಯೋ ರಕ್ಷಣೆಗೆ ಗೌರ್ನರ್ ದೌಡು



ಕೇಂದ್ರ ಸಚಿವ ಸುಪ್ರಿಯೋ ಮತ್ತು ವಿದ್ಯಾರ್ಥಿಗಳ ಮಧ್ಯೆ ತಳ್ಳಾಟ.

**ಕೋಲ್ಕತಾ:** ಆರ್‌ಎಸ್‌ಎಸ್‌ನ ವಿದ್ಯಾರ್ಥಿ ಘಟಕ ಎಬಿವಿಪಿ ಕಾಯ
ಕರ್ತರನ್ನುದ್ದೇಶಿಸಿ ಭಾಷಣ ಮಾಡಲು ಆಗಮಿಸಿದ್ದ ಕೇಂದ್ರ ಸಚಿವ
ಬಾಬುಲ್ ಸುಪ್ರಿಯೋ ಅವರಿಗೆ ಎಡಪಂಥೀಯ ವಿದ್ಯಾರ್ಥಿ ಸಂಘ
ಟನೆಗಳು ಕಪ್ಪು ಬಾವುಟ ಪ್ರದರ್ಶಿಸಿ ಘೇರಾವ್ ಹಾಕಿದ ಹಾಗೂ
ಕೂದಲು ಹಿಡಿದು ಹಿಡಿದು ಎಳೆದಾಡಿದ ಹೀನ ಘಟನೆ ಪಶ್ಚಿಮ ಬಂಗಾ
ಳದ ಜಾಧವ್‌ಪುರ ವಿವಿಯಲ್ಲಿ ನಡೆದಿದೆ. ಈ ವೇಳೆ ಸಚಿವರನ್ನು ರಕ್ಷಿಸ
ಲು ರಾಜ್ಯಪಾಲ ಜಗದೀಪ್ ಧನಖಡ ವಿವಿಗೆ ದೌಡಾಯಿಸಿದ್ದಾರೆ.

ಗುರುವಾರ ಮಧ್ಯಾಹ್ನ 2.30ರ ವೇಳೆಗೆ ಇನ್ನೇನು ವಿವಿ ಆವರಣ ಪ್ರವೇಶಿಸಬೇಕಿದ್ದ ಬಾಬುಲ್ ಸುಪ್ರೀಯೋ ಅವರನ್ನು ಸುತ್ತುವರಿದ ಎಡಪಂಥೀಯ ವಿದ್ಯಾರ್ಥಿ ಸಂಘಟನೆಗಳ ಸದಸ್ಯರು, ಸುಮಾರು ಒಂದೂವರೆ ಗಂಟೆ ಕಾಲ ವಿವಿ ಪ್ರವೇಶಿಸದಂತೆ ತಡೆದರು. ಸಂಜೆ 5 ಗಂಟೆ ಹಾಗೂ ಸಂಜೆ 6.50 ಮತ್ತು 7.12 ಗಂಟೆ ವೇಳೆಗೆ ಪುನಃ ವಿವಿ ಆವರಣ ಪ್ರವೇಶಿಸಲು ಯತ್ನಿಸುವಾಗಲೂ ವಿದ್ಯಾರ್ಥಿಗಳಿಂದ ತೀವ್ರ ಪ್ರತಿರೋಧ ಎದುರಿಸಿದರು. ಕೊನೆಗೆ, ರಾಜ್ಯಪಾಲರು ಮಧ್ಯಸ್ಥಿಕೆ ವಹಿಸಿದರೂ, ವಿದ್ಯಾರ್ಥಿಗಳು ಬಾಬುಲ್ ಅವರಿಗೆ ವಿವಿ ಆವರಣ ಪ್ರವೇಶಕ್ಕೆ ನಿರಾಕರಿಸಿದರು.

ಈ ಬಗ್ಗೆ ಆಕ್ರೋಶ ವ್ಯಕ್ತಪಡಿಸಿದ ಸಚಿವ ಬಾಬುಲ್ ಸುಪ್ರಿಯೋ, ನಾನಿಲ್ಲ ರಾಜಕೀಯ ಮಾಡಲು ಬಂದಿರಲಿಲ್ಲ. ಕೆಲ ವಿದ್ಯಾರ್ಥಿಗಳು ನನ್ನ ಕೂದಲು ಹಿಡಿದು ಎಳೆದಾಡಿದರು. ನಕ್ಸಲೀಯರಿಗೆ ಹೋಲಿಕೆ ಮಾಡುವಂತೆ ನನ್ನನ್ನು ಪ್ರಚೋದಿಸಲಾಯಿತು ಎಂದಿದ್ದಾರೆ.

12